# ಕುತೂಹಲ, ಕಲಿಕೆ ಮತ್ತು ಭಾಷೆ

## Curiosity learning and language

ನಟ ರಾಮಚಂದ್ರನ್

ಕುತೂಹಲವು ಎಲ್ಲಾ ಪ್ರಾಣಿ ಪ್ರಭೇದಗಳಲ್ಲಿಯೂ ಸ್ವಾಭಾವಿಕವಾಗಿಯೇ ಅಂತಸ್ಥವಾಗಿರುವ ಮತ್ತು ಒಂದು ವಿಕಸನಶೀಲ ಲಕ್ಷಣವಾಗಿದೆ, ಅದರಲ್ಲೂ ಮನುಷ್ಯರಲ್ಲಿ ಅದು ಹೆಚ್ಚು ವಿಸ್ತೃತವಾಗಿದೆ. ಮನುಷ್ಯರಲ್ಲಿರುವ "ಅರಿಯಬೇಕು" ಎನ್ನುವುದರ ಬಗೆಗಿನ ಸ್ವಾಭಾವಿಕ ತುಡಿತವು ಮೆದುಳಿನಲ್ಲಿ ತನ್ನ ಗ್ರಹಿಸಿದ್ದನ್ನು ಉಳಿಸುತ್ತದೆ ಮತ್ತು ಅದುವೇ ಜ್ಞಾನವಾಗಿದೆ. ಅಂತಹ ಜ್ಞಾನವು ಒಂದೋ ನಿರ್ಣಾಯಕವಾಗಿರುತ್ತದೆ (ಉದಾಹರಣೆಗೆ ಒಂದು ನಿಖರ ಉತ್ತರ) ಅಥವಾ ಕಲಿಕೆಯಾಗಿರುತ್ತದೆ (ಉದಾಹರಣೆಗೆ, ಒಬ್ಬ ವ್ಯಕ್ತಿಯು ಎಷ್ಟೇ ಕುತೂಹಲವನ್ನು ಹೊಂದಿದ್ದರೂ ಎಲ್ಲಾ ಸಲವೂ ತೃಪ್ತಿದಾಯಕ ಉತ್ತರವನ್ನು ಪಡೆಯಲು ಸಾಧ್ಯವಿಲ್ಲ, ಹೀಗಾಗಿ ಅದೇ ಒಂದು ಕಲಿಕೆಯಾಗುತ್ತದೆ). ಅಂತಹ ಕುತೂಹಲದ ಫಲಗಳು ಬಹಳ ಸಲ ಮಾನವರಿಗೆ ಪ್ರಯೋಜನವಾಗುವ ರೀತಿಯ ಪರಿಣಾಮಗಳ ಸಲುವಾಗಿ ಬಳಕೆಯಾಗುತ್ತವೆ, ಇದಕ್ಕೆ ವೈಜ್ಞಾನಿಕ ಅನ್ವೇಷಣೆಗಳು ಮತ್ತು ಶೋಧನೆಗಳೇ ಒಂದು ದೃಷ್ಟಾಂತವಾಗಿವೆ. ಪರಿಣಾಮಗಳು ಏನೇ ಇರಲಿ, "ಅರಿಯಬೇಕು" ಎನ್ನುವುದು ಮನಸ್ಸಿನ ಕುತೂಹಲವನ್ನು ತಣಿಸಿಕೊಳ್ಳುವ ಒಂದು ಕ್ರಿಯೆಯಾಗಿದೆ. ಆದ್ದರಿಂದ ಕುತೂಹಲವನ್ನು ಮೊದಲನೆಯದಾಗಿ, ಅದು  ಸ್ವಾಭಾವಿಕವಾಗಿಯೇ ಮಾನವರಲ್ಲಿ ಅಂತಸ್ಥವಾಗಿರುವ ಒಂದು ಲಕ್ಷಣ ಎಂಬ ಕಾರಣದ ಜೊತೆಗೆ ಕೇವಲ ಅದು ಕುತೂಹಲ ಎನ್ನುವ ಕಾರಣಕ್ಕೆ; ಮತ್ತು ಎರಡನೆಯದಾಗಿ, ಅದು ಮುಂದಿನ ದಿನಗಳಲ್ಲಿ ಪ್ರಯೋಜನಕಾರಿ ಪರಿಣಾಮಗಳನ್ನು ಉಂಟುಮಾಡಬಲ್ಲುದು  ಎನ್ನುವ ಕಾರಣಕ್ಕೂ ಅದನ್ನು ಪೋಷಿಸಬೇಕು.

ನವಜಾತ ಶಿಶುವೊಂದು ಈ ಜಗತ್ತಿನಲ್ಲಿರುವ ವಸ್ತುಗಳು, ಜನ ಮತ್ತು ಘಟನೆಗಳನ್ನು ಕುರಿತು ಯಾವುದೇ ಅರಿವು ಮತ್ತು ಗ್ರಹಿಕೆ ಇಲ್ಲದೆ ಈ ಜಗತ್ತಿಗೆ ಕಾಲಿಡುತ್ತದೆ. ಆದರೆ ಅದು ಕುತೂಹಲವೆಂಬ ವರ ಪಡೆದುಕೊಂಡು ಈ ಲೋಕಕ್ಕೆ ಬರುತ್ತದೆ ಮತ್ತು "ಕಲಿಯುವ" ಪ್ರಕ್ರಿಯೆಗೆ ಅದನ್ನೊಂದು ಚಾಲಕ ಶಕ್ತಿಯಂತೆ ಬಳಸುತ್ತದೆ, ಅದು ತನ್ನದೇ ಕುತೂಹಲವನ್ನು ತಣಿಸಿಕೊಳ್ಳುವ ಸಲುವಾಗಿ ಎನ್ನಬಹುದು. ಹೀಗೆ ತನ್ನದೇ ಕುತೂಹಲದ ತುಡಿತವನ್ನು ತೃಪ್ತಿಪಡಿಸುವ ಪ್ರಕ್ರಿಯೆಯಲ್ಲಿ  ಮಗುವು "ಕಲಿಯುತ್ತದೆ." ಮಗುವು ಬೆಳೆಯುತ್ತ ಹೋದಂತೆ ಅದರ ಮೂಲಭೂತ ಕುತೂಹಲವನ್ನು ಉಳಿಸುವ ಹೊಣೆ ಮಗುವಿನ ಬಗೆಗೆ ನಿಗಾವಹಿಸುವವರು, ಪಾಲಕರು, ಪೋಷಕರು ಮತ್ತು ಕುಟುಂಬದ ಹಿರಿಯರು ಎಲ್ಲರ ಮೇಲೂ ಇರುತ್ತದೆ; ಇವರೆಲ್ಲರೂ ಒಂದು ಮಗುವಿನ ಕುತೂಹಲವನ್ನು ತೃಪ್ತಿ ಪಡಿಸುವ ಮತ್ತು ಅದನ್ನು ಉಳಿಸುವ ನಿಟ್ಟಿನಲ್ಲಿ ಪ್ರಾಥಮಿಕ ಹಂದರವನ್ನು ಒದಗಿಸುವಂಥವರು. ಅದನ್ನವರು ಭಾಷಾ ರಚನೆಗಳೊಂದಿಗೆ ಒಂದು ಮಗುವು ಅಭಿವ್ಯಕ್ತಿಸಲು, ಸಂಬಂಧ ಕಲ್ಪಿಸಲು ಮತ್ತು ಇತರರಿಗೆ ತನ್ನ ದನಿಯನ್ನು ತಲುಪಿಸಲು ನೆರವಾಗುವ ಮೂಲಕ  ಮಾಡುತ್ತಾರೆ. ಒಂದು ಮಗುವು ಬೆಳೆಯುತ್ತ ಹೋದಂತೆ ಇನ್ನೂ ಹೆಚ್ಚಿನ ಸಂಬಂಧ

ಜೋಡಣೆಯೊಂದಿಗೆ, ಶಬ್ದಗಳು ಮತ್ತು ವಾಕ್ಯಗಳೊಂದಿಗೆ ತನ್ನ ನರಕೋಶಗಳಿಗೆ ಆಹಾರ ಒದಗಿಸುತ್ತ ಹೋಗುತ್ತದೆ ಮತ್ತು ಅದರೊಂದಿಗೆ ಮಗುವಿನ ಅಂತಸ್ಥ ಕುತೂಹಲವು, ಹಲ್ಲು ಮೊಳೆಯುತ್ತಿರುವ ಮಗುವು ತನ್ನ ಕೈಗೆ ಸಿಕ್ಕ ವಸ್ತುಗಳನ್ನೆಲ್ಲಾ ತಿನ್ನಲು ಮತ್ತು ರುಚಿ ನೋಡಲು ಬಯಸುವಂತೆ ಇನ್ನೂ ಹೆಚ್ಚಿನ ಕಲಿಕೆಗಾಗಿ ಹಾತೊರೆಯುತ್ತದೆ.

ಭಾಷೆಯು ಅಭಿವ್ಯಕ್ತಿಗೊಂದು ಮಾಧ್ಯಮವೇ ಆಗಿರಬೇಕೆಂದಿಲ್ಲ; ಅದು ಮಗುವಿನ ಅಭಿವ್ಯಕ್ತಿಯ ಮೊದಲ ನಿರ್ಬಂಧವೂ ಆಗಿದೆ ಎಂದು ಯಾರಾದರೂ ವಾದಿಸಬಹುದು. ಭಾಷಾ ರಚನೆಗಳ ಮುಖಾಂತರ ತಮ್ಮ ಬೇಕು ಬೇಡಗಳನ್ನು, ಭಾವನೆಗಳನ್ನು ಅಭಿವ್ಯಕ್ತಿಸಲು  ಕಲಿಯುವವರೆಗೆ ಮಕ್ಕಳು ಅನಿಯಂತ್ರಿತರಂತೆ ಇರುತ್ತಾರೆ, ಗುರುಗುಟ್ಟುತ್ತ, ನರಳುತ್ತ, ಅಳುತ್ತ, ಕಿರಿಚುತ್ತ, ಗೊಜಗುಟ್ಟುತ್ತ, ತೊದಲು ಮಾತಾಡುತ್ತ ತಮ್ಮ ಭಾವನೆಗಳನ್ನು ಹೊರಗೆಡವುತ್ತಾರೆ. ಹೀಗಾಗಿ ಮಗುವಿನ ಅಗತ್ಯಗಳು, ಬೇಡಿಕೆಗಳು ಮತ್ತು ಭಾವನೆಗಳನ್ನು ಅರ್ಥಮಾಡಿಕೊಳ್ಳುವುದು ಪೋಷಕರ ಹೊಣೆಯಾಗಿದೆ. ಭಾಷಿಕ ಕಟ್ಟುಗಳಿಲ್ಲದೆಯೇ ಮಕ್ಕಳು ವಿವಿಧ ರೀತಿಗಳಲ್ಲಿ ತಮ್ಮನ್ನು ತಾವು ಅಭಿವ್ಯಕ್ತಿಸುತ್ತಾರೆ, ಅವರಿಗೆ ಅಕ್ಷರಗಳು ಮತ್ತು ಶಬ್ದಗಳನ್ನು "ಕಲಿಸುವ"ವರೆಗೂ, ಅಂದರೆ ಅಭಿವ್ಯಕ್ತಿಗಳನ್ನು ಸರಿಯಾದ ವಿಧದಲ್ಲಿ ಇಡಲು ಮತ್ತು ಬೇಡಿಕೆಗಳಿಗೆ ಭಾಷೆಯ ಮೂಲಕ ಸರಿಯಾದ ರೂಪ ನೀಡಲು ಕಲಿಯುವ ಹಂತದವರೆಗೂ  ಅವರು ಈ ವಿಧದ ಅಭಿವ್ಯಕ್ತಿಗಳನ್ನು ಬಳಸುತ್ತಿರುತ್ತಾರೆ. ಭಾಷೆಯು ಅಭಿವ್ಯಕ್ತಿಗಳನ್ನು ಎಷ್ಟೇ ನಿರ್ಬಂಧಪಡಿಸಲಿ, ವಾಸ್ತವ ಸಂಗತಿ ಏನೆಂದರೆ, ಎಲ್ಲರೂ ಅಧಿಕೃತವಾಗಿ ಒಪ್ಪಿಕೊಂಡ ಭಾಷಾಶಾಸ್ತ್ರೀಯ ಮತ್ತು ವ್ಯಾಕರಣಾತ್ಮಕ ಚೌಕಟ್ಟಿಲ್ಲದ ಒಂದು ಲೋಕವು  ಕುತೂಹಲದ ಪೋಷಣೆಯನ್ನೂ ಮಾಡಲಾರದು ಅಥವಾ ಜ್ಞಾನವನ್ನೂ ವಿಸ್ತರಿಸದು.

ಆದರೂ ಕುತೂಹಲವೆಂಬುದು ಕ್ಷಣಭಂಗುರ. ಒಮ್ಮೆ ಒಂದು ಸಂಗತಿಯನ್ನು "ಅರಿತ" ಮೇಲೆ ಕುತೂಹಲದ ತುಡಿತವು ತುಲನಾತ್ಮಕವಾಗಿ ಕಡಿಮೆಯಾಗುತ್ತದೆ, ಇನ್ನೇನಾದರೂ ಮೆದುಳಿನಲ್ಲಿ ಅದು ಉಳಿಸುವ ಜ್ಞಾನವು "ಮತ್ತಷ್ಟು ಅರಿಯುವ" ಸಲುವಾಗಿ ತಾನೇ ಮತ್ತೆ ಬುಗ್ಗೆಯಾಗಿ ಚಿಮ್ಮಿದರೆ ಆಗ ಮತ್ತೆ ಕುತೂಹಲವು ಪ್ರೇರೇಪಕವಾಗಬಹುದು. ಆದ್ದರಿಂದ ಕುತೂಹಲದ ಪೋಷಣೆಯು ಬರಿಯ ಉತ್ತರಗಳನ್ನು ಒದಗಿಸುವುದರಿಂದ ಮಾತ್ರ ನೆರವೇರುವುದಿಲ್ಲ, ಅದರ ಜೊತೆಜೊತೆಗೇ ಇನ್ನಷ್ಟು ಪ್ರಶ್ನೆಗಳನ್ನು ಪ್ರೇರೇಪಿಸುವಂತಹ ಕುತೂಹಲದ ಬೀಜಗಳನ್ನು ಬಿತ್ತುತ್ತಲೇ ಇರಬೇಕು. ಕುತೂಹಲದ ಮೌಲಿಕ ಮತ್ತು ಕ್ರಮೇಣ ಕ್ಷೀಣಿಸುವ ಅದರ ಗುಣವನ್ನು ಪರಿಗಣಿಸಿದರೆ ಮಕ್ಕಳ ಕಲಿಕೆಗೆ ಸಹಾಯಕವಾಗುವ ಮತ್ತು ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಮಕ್ಕಳಲ್ಲಿ ಕುತೂಹಲವನ್ನು ಉಳಿಸಿ, ಬೆಳೆಸಬೇಕಾದದ್ದು ಸಮಾಜಗಳ ಹೊಣೆಯಾಗಿರುತ್ತದೆ.




[ “ಕುತೂಹಲ ಕಪ್ಪುಬೆಕ್ಕನ್ನು ಕೊಂದಿತು” ಎಂಬ ಗಾದೆ ಮಾತಿದೆ ಜ್ಞಾನದ ಹಾದಿಗೆ  ಯಾವುದೂ ಅಡೆತಡೆಯಾಗುವುದಿಲ್ಲ!]

ಇವತ್ತಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ನಮ್ಮೊಳಗೆ ಅಂತಸ್ಥವಾಗಿರುವ ಕುತೂಹಲವನ್ನು ಸ್ವಾಗತಿಸುವವರೂ ಇಲ್ಲ, ಪೋಷಿಸುವವರೂ ಇಲ್ಲ ಎನ್ನುವುದು ದುಃಖದ ಸಂಗತಿಯಾಗಿದೆ, ಮಕ್ಕಳು ತಾವು ಕಲಿಯಬೇಕು ಎನ್ನುವ ಕಾರಣಕ್ಕೆ ಕಲಿಯುತ್ತಿರುತ್ತಾರೆ. ಗಾಣದೆತ್ತಿನಂತೆ ಒಂದೇ ಸಮನೆ ಕಲಿಸುತ್ತಲೇ ಇರುವ  ನಮ್ಮ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಅನವಶ್ಯಕ ಸಂಗತಿಗಳು ಸಂಚಯವಾಗುತ್ತ ಶಿಕ್ಷಣ ಪ್ರಕ್ರಿಯೆಯೇ ಅವನತಿ ಹೊಂದುತ್ತಿದೆ. ಹುಟ್ಟಿನೊಂದಿಗೇ ಕುತೂಹಲವನ್ನು ಇರಿಸಿಕೊಂಡು ಬರುವ ನಮ್ಮಂತಹ ಜೀವಿಗಳ ಸ್ಥಿತಿಯನ್ನು ನೋಡಿದರೆ ಇದು ನಿಜಕ್ಕೂ ಒಂದು ವಿಪರ್ಯಾಸವೇ ಸರಿ, ಏಕೆಂದರೆ ನಮ್ಮ ಪಠ್ಯಕ್ರಮವು ಇಲ್ಲಿನ ಎಳೆಯ ಮೆದುಳುಗಳಲ್ಲಿ ಅವರ ಅಂತಸ್ಥ ಕುತೂಹಲಕ್ಕೆ ಸಂಬಂಧವೇ ಇರದ ವಿಷಯಗಳನ್ನು ತುಂಬುತ್ತಿದೆ. ಶಾಲೆಗಳಲ್ಲಿ ಕಲಿಸಲಾಗುವ “ಪಾಠಗಳು” ಸುಭದ್ರ ಉದ್ಯೋಗ ಮತ್ತು ಜೀವನೋಪಾಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅನಿಯಮಿತ ರೂಪದಲ್ಲಿ ಸಜ್ಜುಗೊಂಡಂಥವು. ಹೆಚ್ಚಿನ “ಕಲಿಕೆ” ಮತ್ತು ಅದರ ಪರಿಣಾಮವಾಗಿ ಹೊರಬರುವ “ಜ್ಞಾನ”ವು ಅತ್ತ ಮತ್ತಷ್ಟು ಅರಿಯುವ ನಮ್ಮ ಕುತೂಹಲವನ್ನೂ ಕೆರಳಿಸುವುದಿಲ್ಲ, ಇತ್ತ ನಮ್ಮ ನಿತ್ಯದ ಬದುಕಿನಲ್ಲಿ ಬಳಕೆಯೂ ಆಗುತ್ತಿಲ್ಲ. ಉದಾಹರಣೆಗೆ, ನಮ್ಮಲ್ಲಿನ ಎಷ್ಟು ವಿದ್ಯಾವಂತರು ತಮ್ಮ ನಿತ್ಯದ ಬದುಕಿನಲ್ಲಿ ಇಂಟೆಗ್ರಲ್ಸ್ (integrals) ನಂತಹ ಪರಿಕಲ್ಪನೆಗಳ ಉಪಯೋಗ ಮಾಡುತ್ತಿರುತ್ತಾರೆ? ಇದು ವರ್ತಮಾನದ ಶಿಕ್ಷಣ: ಅನವಶ್ಯಕ ಸಂಗತಿಗಳನ್ನು ನಮ್ಮ ಮೆದುಳುಗಳಿಗೆ ತುರುಕುವ ಮತ್ತು ಪರೀಕ್ಷೆಗಳಲ್ಲಿ ಅವುಗಳನ್ನು ಸರಿಸುಮಾರಾಗಿ ಹೊರಹಾಕುವ ಸಲುವಾಗಿ ಸಾಮಾಜಿಕವಾಗಿ ಅಂಗೀಕೃತಗೊಂಡ ಮತ್ತು ವ್ಯವಸ್ಥಿತವಾಗಿ ರಚನೆಗೊಂಡ ಒಂದು ಪ್ರಕ್ರಿಯೆ; ಶಾಲೆಗಳಲ್ಲಿ ಅದಕ್ಕೆ ಪ್ರತಿಫಲ ಸಿಗುತ್ತದೆ, ಅಂಕಗಳು ಸಿಗುತ್ತವೆ, ಅರ್ಹ ಎಂದು ಮಾನ್ಯ ಮಾಡಲಾಗುತ್ತದೆ ಮತ್ತು ರ್ಯಾಂಕುಗಳನ್ನು ನೀಡಲಾಗುತ್ತದೆ.

"ಕಲಿಕೆಗಾಗಿ ಕಲಿಕೆ" ಎನ್ನುವಂತಹ ಪೊಳ್ಳು ತರ್ಕಗಳನ್ನು ನಾವು ಬಿಟ್ಟುಬಿಡಬೇಕು. ಶಿಕ್ಷಣದ ಒಲವು ಅದೇಕೆ ಕೇವಲ ಸಂಗತಿಗಳು, ವ್ಯಾಖ್ಯಾನಗಳು, ತತ್ವಗಳು, ಪದಗುಚ್ಛಗಳು, ಸಿದ್ಧಾಂತಗಳು ಮತ್ತು ಸೂತ್ರಗಳನ್ನು ಸಂಗ್ರಹಿಸುವುದರ ಮೇಲೆ ಕೇಂದ್ರೀಕೃತವಾಗಿರಬೇಕು ಎಂಬ ಪ್ರಶ್ನೆಯನ್ನು ಎತ್ತಬೇಕು. ಹೀಗೆ ಏಕಪಕ್ಷೀಯವಾಗಿ ಮಕ್ಕಳ ತಲೆಗೆ ತುರುಕುವ ಶಿಕ್ಷಣದಿಂದ ಆಗುವ ಹಾನಿಯೆಂದರೆ, ಇವತ್ತಿನ ಸನ್ನಿವೇಶದಲ್ಲಿ ಮಕ್ಕಳು ಕಲಿಯುವ ಆಸಕ್ತಿಯನ್ನೇ ಕಳೆದುಕೊಳ್ಳುತ್ತಾರೆ, ಮತ್ತು ಅದರ ಪರಿಣಾಮವಾಗಿ ಸಂಬಂಧವಿಲ್ಲದ ವಿಷಯಗಳನ್ನು ಸಂಗ್ರಹ ಮಾಡಿಟ್ಟುಕೊಳ್ಳುವ ಹಾಗಾಗುತ್ತದೆ, ಜೊತೆಗೆ ಸಮಾಜದ ಸಂಪನ್ಮೂಲಗಳೂ ಪೋಲಾಗುತ್ತಿರುತ್ತವೆ, ಒಟ್ಟಾರೆ ಶೈಕ್ಷಣಿಕ ವ್ಯವಸ್ಥೆಯ ಮೇಲೆಯೇ ಒಂದು ರೀತಿಯ ಅಸಮಾಧಾನ ಬೆಳೆದುಕೊಳ್ಳುವುದು ತೋರುತ್ತದೆ.

ಶಿಕ್ಷಣವು ಪ್ರಶ್ನಿಸುವುದರ ಮೂಲಕ "ಕಲಿಯುವ" ಮತ್ತು ಆ ಮೂಲಕ ಅರಿಯುವ ಪ್ರಕ್ರಿಯೆಯ ಮೇಲೆ ಕೇಂದ್ರೀಕೃತವಾಗಬೇಕು. ಹಾಗೆ ಅರಿಯಲು ಮತ್ತು ಕಲಿಯಲು ನಮ್ಮ ಕುತೂಹಲಿ ಮನಸ್ಸುಗಳನ್ನು ನಾವು ಹೊಂದಿಸಿಕೊಳ್ಳಬಹುದು. ಪ್ರಶ್ನಿಸುವುದರ ಮೇಲಿನ ನಮ್ಮ ಸ್ವಾಭಾವಿಕ ಒಲವಿಗೆ ಭಾಷೆ ದಾರಿಯಾಗಬೇಕು: ಮಕ್ಕಳಿಗೆ ಪ್ರಶ್ನಿಸುವುದು ಮತ್ತು ಅದರ ಪರಿಣಾಮವಾಗಿ ಅರಿತುಕೊಳ್ಳುವುದು ರೂಢಿಯಾಗಲು ಭಾಷಾ ಬೋಧನೆಯು ಉತ್ತಮ ಹಾದಿ ಎಂಬ ಅಂಶಕ್ಕೆ ಮಹತ್ವ ನೀಡಬೇಕು. ಆಗ ಭಾಷೆಯು, ಒಬ್ಬರ ಭಾವನೆಗಳನ್ನು ಸಮಾಜಕ್ಕೆ ತಲುಪಿಸುವ ಮಾಧ್ಯಮವಾಗುವುದಷ್ಟೇ ಅಲ್ಲ, ಅವರು ತಮ್ಮೊಳಗೇ ಇರುವ ವಿಸ್ಮಯಗಳ ಬಗೆಗೆ ಅರಿತುಕೊಳ್ಳಲೂ ಸಹಾಯಕಾರಿಯಾಗುತ್ತದೆ.

ಮಾತೆತ್ತಿದರೆ "ಕುತೂಹಲ ಬೆಕ್ಕನ್ನು ಕೊಂದಿತು" ಎಂಬ ಗಾದೆ ಮಾತು ಹೇಳಿ ಕುತೂಹಲಕ್ಕೆ ತಣ್ಣೀರೆರೆಚಲಾಗುತ್ತದೆ. ಅದು ಬೆಕ್ಕನ್ನು ಏಕೆ ಕೊಂದಿತು ಎಂದು ಮಾತ್ರ ಯಾರೂ ಕೇಳುವುದಿಲ್ಲ. ಮುಂದಿನ ಸಲವಾದರೂ "ಕುತೂಹಲದಿಂದ ಬೆಕ್ಕು ಅದೇಕೆ ಸಾಯುತ್ತದೆ?" ಎಂದು ಕೇಳಬೇಕಾಗುತ್ತದೆ.

**ನಟ ರಾಮಚಂದ್ರನ್** ಅವರು ಡೆಲಾವೇರ್‌ನ ವಿಲ್ಮಿಂಗ್ಟನ್ನಿನಲ್ಲಿ ಕೆಲಸ ಮಾಡುತ್ತಾರೆ. ಅವರು ಲೋಕದ ಪ್ರತಿಯೊಂದು ಸಂಗತಿಯಲ್ಲೂ ತಮ್ಮದೇ ಅಭಿಪ್ರಾಯ ಹೊಂದಿದ್ದಾರೆ. ವಿಕಾಸವಾದಿ ವಿಜ್ಞಾನ, ರಾಜಕೀಯ ತತ್ವಶಾಸ್ತ್ರ, ಕಲಿಕೆಯ ಕ್ಷೇತ್ರದಲ್ಲಿ ಅವರಿಗೆ ಆಸಕ್ತಿ ಇದೆ ಮತ್ತು ಜಗತ್ತಿನ ಶಾಂತಿಯನ್ನು ಕಾಪಾಡಬೇಕೆಂದರೆ ನಾಸ್ತಿಕವಾದವೇ ಎಲ್ಲರ ನಿಲುವಾಗಬೇಕೆಂದು ಅವರು ವಾದಿಸುತ್ತಾರೆ. ಬಿಡುವಿನ ಸಮಯದಲ್ಲಿ ತಾವು "ಹೋಮರ್ ಸಿಂಪ್ಸನ್" ("ದ ಸಿಂಪ್ಸನ್ಸ್" ಕಾರ್ಟೂನ್ ಮಾಲಿಕೆಯ ಒಂದು ಪಾತ್ರ) ಎಂದು ತಮ್ಮನ್ನು ತಾವು ಗುರುತಿಸಿಕೊಳ್ಳುತ್ತಾರೆ. ಅವರನ್ನು ಈ ಇಮೇಲ್ ಮೂಲಕ ಸಂಪರ್ಕಿಸಬಹುದು: ***Natarajan.ramachandran@gmail.com***